(ಇಂದು ದಿನಾಂಕ: 21-07-2026 ರಂದು ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿದಾರರನ್ನು ಪುನಃ ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ಶ್ರೀ ಎಸ್ ಜಿ ಕೆ ವಕೀಲರಿಂದ:**

1. ನಾನು ದ್ವಿತೀಯ ಪಿಯುಸಿ ಕನ್ನಡ ಮಾಧ್ಯಮದಲ್ಲಿ ಓದಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ಸಾಕ್ಷಿಗೆ ಸಿಸಿ ನಂ.447/2015 ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿರುವ ದಾಖಲೆ ಮ್ಯೂಟೇಶನ್ ನಂ. 365 ದಿಃ 12-06-1984 ದೃಢೀಕೃತ ನಕಲು ಪ್ರತಿ ಪಡೆದ ದಿಃ30-03-2012 ನೇದ್ದನ್ನು ತೋರಿಸಲಾಗಿ ಆದರ ಬಗ್ಗೆ ನನಗೆ ಗೊತ್ತಿಲ್ಲ ಅಂತಾ ಸಾಕ್ಷಿ ನುಡಿಯುತ್ತಾರೆ.

2. ಪ್ರಸ್ತುತ ದಾವೆ ಸರ್ವೇ ನಂ. 758 ಗೆ ಸಂಬಂಧಪಟ್ಟಿದ್ದು ಇರುತ್ತದೆ. ಸದರಿ ಸರ್ವೇ ನಂಬರ ದುರ್ಗಪ್ಪ ತಂದೆ ಪವಾಡೆಪ್ಪ ರವರ ಹೆಸರಲ್ಲಿ ಎಷ್ಟು ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಸಿಸಿ ನಂ.447/2015 ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿರುವ ಮ್ಯೂಟೇಶನ್ ನಂ. 365 ದಿಃ 12-06-1984 ತೋರಿಸಲಾಗಿ ಅದರಲ್ಲಿ ಸರ್ವೇ ನಂ. 758/ಅ ವಿಸ್ತೀರ್ಣ 12 ಎಕರೆ 14 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ ಅಂತಾ ಸಾಕ್ಷಿ ನುಡಿಯುತ್ತಾರೆ. ಸದರಿ ಮ್ಯೂಟೇಶನ್ ಪ್ರತಿಯಲ್ಲಿಯ ಜಮೀನು ವಿಸ್ತೀರ್ಣ ಎಷ್ಟು ಅಂತಾ ಅದನ್ನು ಪರೀಶೀಲಿಸಿ ನೋಡಿ ಅಂತಾ ಸಾಕ್ಷಿಗೆ ಹೇಳಲಾಗಿ, ನನಗೆ ಹೇಳಲಾಗುವುದಿಲ್ಲ ಅಂತಾ ಸಾಕ್ಷಿ ನುಡಿಯುತ್ತಾರೆ.

3. ಸಾಕ್ಷಿಗೆ ಸಿಸಿ ನಂ.447/2015 ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿರುವ ನಾನು ಶಂಕರಪ್ಪರವರ ಬಳಿಯಿಂದ ಖರೀದಿಸಿರುವ ನೊಂದಣಿ ಖರೀದಿ ಪತ್ರ ಸಂಖ್ಯೆ 1954/2012-13 ದಿಃ 08-03-2013 ನೇದ್ದಕ್ಕೆ ಲಗತ್ತಿಸಲಾದ ನಕಾಶೆ ಸರಿಯಾಗಿದೆ. ಸಾಕ್ಷಿ ಮುಂದುವರೆದು ಶಂಕ್ರಪ್ಪರವರು ತಾವು ನಮೂನೆ ಸಂಖ್ಯೆ -10 ತಯಾರಿಸಲು ಅರ್ಜಿ ಸಲ್ಲಿಸಿರುತ್ತೇನೆ ಅಂತಾ ಅವರು ನನಗೆ ಹೇಳಿದರು. ಮೂಲ ಖರೀದಿ ಪತ್ರ ನಿಪಿ-1 ನೇದ್ದರ ಜೊತೆಗೆ ನಾನು ಸದರಿ ನಕಾಶೆಯನ್ನು ಲಗತ್ತಿಸಿಲ್ಲ ಅಂತಾ ಸೂಚಿಸಿದಾಗ ಸಾಕ್ಷಿಯು ನಾನು ಎಲ್ಲ ದಾಖಲೆಗಳನ್ನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ ಅವರು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 2014 ರ ಪೂರ್ವದಲ್ಲಿ ಸಂಪೂರ್ಣ ಪಹಣಿ ಅಂತಾ ಇದ್ದ ಪಕ್ಷದಲ್ಲಿ ನಕಾಶೆಯ ಅವಶ್ಯಕತೆ ಇರಲಿಲ್ಲ ಕಾರಣ ನಾನು ಸಂಪೂರ್ಣ ಪಹಣಿ ಆಧಾರದ ಮೇಲೆ ನೊಂದಣಿ ಖರೀದಿ ಪತ್ರವನ್ನು ನೊಂದಣಿ ಮಾಡಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-1 ಖರೀದಿ ಪತ್ರ ನೊಂದಣಿ ಮಾಡಿಸುವ ವೇಳೆಯಲ್ಲಿ ಅದರಲ್ಲಿದ್ದ ನಕಾಶೆ ಅದರ ಜೊತೆ ಲಗತ್ತಿಸಲಾಗಿತ್ತೋ ಇಲ್ಲವೋ ನಾನು ಗಮನಿಸಿಲ್ಲ. ಸಿಸಿ ನಂ.447/2015 ಪ್ರಧಾನ ಸಿವಿಲ್ ನ್ಯಾಯಾಲಯದ ಕಡತದಲ್ಲಿರುವ ಖರೀದಿ ಪತ್ರದ ಜೊತೆಗೆ ನಕಾಶೆ ಇದ್ದು ಅದು ಸರಿ ಇದೆಯೋ ಇಲ್ಲವೋ ಅದರ ಬಗ್ಗೆ ನನಗೆ

ಮಾಹಿತಿ ಇಲ್ಲ. ಸಿಸಿ ನಂ.447/2015 ಪ್ರಧಾನ ಸಿವಿಲ್ ನ್ಯಾಯಾಲಯದ ಕಡತದಲ್ಲಿರುವ ಖರೀದಿ ಪತ್ರದ ಯಾವ ಹಾಳೆಯ ಮೇಲೆ ನನ್ನ ಸಹಿ ಇದೆಯೋ, ಅಷ್ಟೇ ಖರೀದಿ ಪತ್ರದ ಭಾಗ ನನಗೆ ಸಂಬಂಧಪಟ್ಟಿದ್ದು ಇದ್ದು, ಯಾವ ಹಾಳೆಯ ಮೇಲೆ ನನ್ನ ಸಹಿ ಇಲ್ಲವೋ ಅದು ನನಗೆ ಸಂಬಂಧಪಟ್ಟಿದ್ದು ಅಲ್ಲ ಎಂದು ನುಡಿಯುತ್ತಾರೆ.

4. ಸದರಿ ಸಿಸಿ ನಂ.447/2015 ಪ್ರಧಾನ ಸಿವಿಲ್ ನ್ಯಾಯಾಲಯದ ಕಡತದಲ್ಲಿರುವ ಖರೀದಿ ಪತ್ರದ ಪ್ರತಿಯನ್ನು ನಿಶಾನೆ ನಿಡಿ-1 ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಅವರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲಿಗಾಗಿ ಮುಂದಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು